ಅ) ಕನ್ನಡ-ಕನ್ನಡ ನಿಘಂಟು ಕಛೇರಿಯಲ್ಲಿ ಸುಮಾರು 17-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರು ನಿಘಂಟಿನ ಕಾರ್ಯ ಮುಗಿದ ಮೇಲೆ ಅವರ ಪರಿಸ್ಥಿತಿ ಏನು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ನೌಕರರನ್ನು ಅನುದಾನ ಸಂಹಿತೆಗೆ ಒಳಪಡಿಸುವ ಆದೇಶವನ್ನು ಸರ್ಕಾರದವರು ಹೊರಡಿಸುವರೇ?

ಶ್ರೀ ಎಂ.ಸಿ. ಪ್ರಕಾಶ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) :

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ

ರಿಗ್ ಬೋರ್‌ಗಳ ಬಗ್ಗೆ

42 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇಲಾಖೆಯಲ್ಲಿರುವ ಒಟ್ಟು ರಿಗ್ ಬೋರ್‌ಗಳು ಎಷ್ಟು?

ಆ) ಇವುಗಳಲ್ಲಿ ಕೆಲಸ ಮಾಡುವ ಸ್ಥಿತಿಯಲ್ಲಿರುವ ರಿಗ್ ಬೋರ್‌ಗಳೆಷ್ಟು?

ಇ) ಕೆಟ್ಟು ನಿಂತಿರುವ ಬೋರ್‌ಗಳನ್ನು ದುರಸ್ತಿಪಡಿಸದಿರಲು ಕಾರಣಗಳೇನು? ಇದರಿಂದಾಗುವ ಹಾನಿಗೆ ಕಾರಣಕರ್ತರಾದವರ ಮೇಲೆ ಕ್ರಮವ ಕೈಗೊಳ್ಳಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 94

ಆ) 84

ಇ) ಅನೇಕ ರಿಗ್ ಯಂತ್ರಗಳು ನಿಗಧಿತ ಅವಧಿ ಅಂದರೆ 12,000 ಕಂಪ್ರೆಸರ್ ಗಂಟೆಗಳು : 12 ವರ್ಷಗಳು ಮೀರಿ ಕೆಲಸ ನಿರ್ವಹಿಸಿದ್ದು ಪದೇ ಪದೇ ರಿಪೇರಿ ಕೆಲಸಗಳು ಬರುತ್ತಿವೆ. ಇದಲ್ಲದೆ ಕೆಲವೊಂದು ರಿಗ್ ಯಂತ್ರಗಳು ಹೊರದೇಶಗಳಿಂದ ಆಮದು ಮಾಡಿಕೊಂಡಿರುವುದರಿಂದ ಅವುಗಳ ಬಿಡಿಭಾಗಗಳು ಸಮಯಕ್ಕೆ ಸಿಗದೇ ಇರುವುದರಿಂದ, ರಿಪೇರಿ ಕೆಲಸ ತಡವಾಗುತ್ತದೆ. ಈ ಮುಖ್ಯ ಕಾರಣಗಳಿಂದಾಗಿ ರಿಗ್ ಯಂತ್ರಗಳನ್ನು ರಿಪೇರಿ ಮಾಡಲು ಬಹಳ ಕಾಲವಾಗುತ್ತದೆ. ಆದ್ದರಿಂದ ರಿಗ್ ಯಂತ್ರಗಳ ಹಾನಿಗೆ ಕಾರಣಕರ್ತರಾದವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಜವಾಹರ್ ರೋಜ್‌ಗಾರ್ ಯೋಜನೆ ಕುರಿತು

540 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಜಿ.ಆರ್. ವೈ. ಅಡಿಯಲ್ಲಿ ಸಕಲೇಶಪುರ ತಾಲ್ಲೂಕಿಗೆ ನಿಗದಿ ಮಾಡಿದ ಹಣ ಎಷ್ಟು? ಬಿಡುಗಡೆ ಆದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು?

ಆ) ಸದರಿ ಯೋಜನೆಗೆ ಕೇಂದ್ರ ಸರ್ಕಾರ ನೀಡಿದ ಹಣ ಎಷ್ಟು? ಹಾಗೂ ರಾಜ್ಯ ಸರ್ಕಾರದ ಹಣ ಎಷ್ಟು?

ಇ) *1995-96ನೇ ಸಾಲಿನಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಸಕಲೇಶಪುರ - ಆಲೂರು ತಾಲ್ಲೂಕಿಗೆ ನಿಗದಿ ಮಾಡಿದ ಹಣ ಎಷ್ಟು? (30-12-95ರೊಳಗೆ ಬಿಡುಗಡೆ ಮಾಡಿದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು?*

ಈ) *1994-95ನೇ ಸಾಲಿನಲ್ಲಿ ಹೆಚ್ಚುವರಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಹಣ ಎಷ್ಟು? (ಸಕಲೇಶಪುರ - ಆಲೂರು ತಾಲ್ಲೂಕು)*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ)

ನಿಗದಿ ಮಾಡಿದ ಹಣ	ಬಿಡುಗಡೆ ಆದ ಹಣ	ಖರ್ಚು ಮಾಡಿದ ಹಣ
	(ಲಕ್ಷ ರೂ.ಗಳಲ್ಲಿ)	
46.776	46.281	32.906

ಆ)

ಕೇಂದ್ರ ಸರ್ಕಾರ ನೀಡಿದ ಹಣ	ರಾಜ್ಯ ಸರ್ಕಾರ ನೀಡಿದ ಹಣ	ಒಟ್ಟು
37.024	9.257	46.281

ಇ)

ತಾಲ್ಲೂಕು	ನಿಗದಿ ಮಾಡಿದ ಹಣ	ಬಿಡುಗಡೆ ಮಾಡಿದ ಹಣ	ಖರ್ಚು ಮಾಡಿದ ಹಣ
		(ಲಕ್ಷ ರೂ.ಗಳಲ್ಲಿ)	
1) ಸಕಲೇಶಪುರ	61.299	24.625	17.373
2) ಆಲೂರು	29.706	17.375	11.632

ಈ) 1994-95ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಹೆಚ್ಚುವರಿ ಜವಾಹರ್ ರೋಜ್ ಗಾರ್ ಯೋಜನೆ ಅನುಷ್ಠಾನದಲ್ಲಿರುವುದಿಲ್ಲ.

ಸಕಲೇಶಪುರ - ಆಲೂರು ತಾಲ್ಲೂಕಿನಲ್ಲಿ ನೀರಿನ ಅಭಾವ

546 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಕಲೇಶಪುರ ಹಾಗೂ ಆಲೂರು ತಾಲ್ಲೂಕುಗಳಲ್ಲಿ ವಿವಿಧ ಯೋಜನೆಗಳಲ್ಲಿ ನೀರಿನ ಪೂರೈಕೆ ಕುರಿತು ಎಷ್ಟು ಗ್ರಾಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಅವುಗಳು ಯಾವ ಹಂತದಲ್ಲಿವೆ?*

ಆ) *ಅವುಗಳನ್ನು ಎಷ್ಟು ದಿನಗಳಲ್ಲಿ ಪೂರೈಸಲಾಗುವುದು?*

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :